# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 1693 |
| ಸದಸ್ಯರ ಹೆಸರು: | ಶ್ರೀ ಕೆ.ಅಬ್ದುಲ್ ಜಬ್ಬರ್ |
| ಉತ್ತರಿಸಬೇಕಾದ ದಿನಾಂಕ: | 18.03.2026 |
| ಉತ್ತರಿಸಬೇಕಾದ ಸಚಿವರು: | ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು |

********

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಮುಜರಾಯಿ ಇಲಾಖೆಯ ಅಧೀನದಲ್ಲಿರುವ ದೇವಸ್ಥಾನಗಳ ಒಟ್ಟು ಸಂಖ್ಯೆ ಎಷ್ಟು;(ಜಿಲ್ಲಾವಾರು ವಿವರ ಒದಗಿಸುವುದು) | ರಾಜ್ಯದಲ್ಲಿ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 34566 ದೇವಸ್ಥಾನಗಳು ಒಳಪಟ್ಟಿರುತ್ತವೆ.<br><br>ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ**ದಲ್ಲಿ ಒದಗಿಸಿದೆ. |
| (ಆ) | ದೇವಸ್ಥಾನಗಳ ವರ್ಗೀಕರಣ (A, B, C ವರ್ಗ) ಯಾವ ಮಾನದಂಡದ ಆಧಾರದ ಮೇಲೆ ಮಾಡಲಾಗಿದೆ. | ರಾಜ್ಯದಲ್ಲಿ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಅಧಿಸೂಚಿತ ಸಂಸ್ಥೆಗಳನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ನಿಯಮಗಳು 2002ರ ನಿಯಮ 3(1) ರಂತೆ ಆಯಾಯ ದೇವಾಲಯಗಳ ಆದಾಯಕ್ಕೆ ಅನುಗುಣವಾಗಿ ಪ್ರವರ್ಗ 'ಎ', 'ಬಿ' ಮತ್ತು 'ಸಿ' ಶ್ರೇಣಿಯ ದೇವಾಲಯಗಳೆಂದು ಈ ಕೆಳಕಂಡಂತೆ ವರ್ಗೀಕರಿಸಲಾಗಿರುತ್ತದೆ:- |

| ಪ್ರ. ವರ್ಗ | ವಿವರ | ಸಂಸ್ಥೆಗಳ ಸಂಖ್ಯೆ |
|---|---|---|
| ಎ | ವಾರ್ಷಿಕವರಮಾನವು ರೂ. ಇಪ್ಪತ್ತೈದು ಲಕ್ಷಗಳನ್ನು ಮೀರಿದ ಸಂಸ್ಥೆಗಳು | 205 |
| ಬಿ | ವಾರ್ಷಿಕ ವರಮಾನವು ರೂ. ಐದು ಲಕ್ಷಗಳನ್ನು ಮೀರಿ ರೂ. ಇಪ್ಪತ್ತೈದು ಲಕ್ಷಗಳನ್ನು ಮೀರದ ಸಂಸ್ಥೆಗಳು | 193 |
| ಸಿ | ವಾರ್ಷಿಕ ವರಮಾನವು ರೂ. ಐದು ಲಕ್ಷಗಳನ್ನು ಮೀರದ ಸಂಸ್ಥೆಗಳು | 34168 |
| | **ಒಟ್ಟು** | **34566** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಇ) | ಕಳೆದ ಮೂರು ವರ್ಷಗಳಲ್ಲಿ ನಡೆದ ಆಡಿಟ್ ವರದಿಗಳಲ್ಲಿ ಕಂಡುಬಂದ ಅಕ್ರಮಗಳು ಯಾವುವು; ಸರ್ಕಾರ ತೆಗೆದುಕೊಂಡ ಕ್ರಮಗಳು ಏನು; | 1. ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಕಲಂ 37(2) ರನ್ವಯ ರೂ.5.00 ಲಕ್ಷ ಅಥವಾ ಹೆಚ್ಚು ಒಟ್ಟು ವಾರ್ಷಿಕ ಆದಾಯವಿರುವ ದೇವಸ್ಥಾನಗಳ ಲೆಕ್ಕ ಪತ್ರಗಳನ್ನು ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆಯಿಂದ ನಡೆಸಲಾಗುತ್ತದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | 2. ಕಲಂ 39(1) ರನ್ವಯ ಆಯಾ ಸಂಸ್ಥೆಯ ಅಧ್ಯಕ್ಷರು, ವ್ಯವಸ್ಥಾಪಕರು ಅಥವಾ ಕಾರ್ಯ ನಿರ್ವಹಣಾ ಅಧಿಕಾರಿ ಅಥವಾ ಸಂದರ್ಭಾನುಸಾರ ಸಂಸ್ಥೆಯ ಆಡಳಿತಕ್ಕೆ ಸಂಬಂಧಪಟ್ಟ ವ್ಯಕ್ತಿಯು ಲೆಕ್ಕ ಪರಿಶೋಧನಾ ವರದಿಗೆ ಅನುಪಾಲನಾ ವರದಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ.<br><br>3. ಅನುಪಾಲನಾ ವರದಿ ಸಲ್ಲಿಸುವ ಬಗ್ಗೆ ನಿರ್ದೇಶನಗಳನ್ನು ನೀಡಲಾಗುತ್ತಿದ್ದು, ಅದರಂತೆ ಸಕ್ಷಮ ಪ್ರಾಧಿಕಾರಿಯಾದ "ಲೆಕ್ಕ ಪರಿಶೋಧನಾ ಮತ್ತು ಲೆಕ್ಕ ಪತ್ರ ಇಲಾಖೆ" ರವರಿಂದ ಆಕ್ಷೇಪಣೆ ವಸೂಲಾತಿ ಕಂಡಿಕೆಗಳಿಗೆ ತೀರುವಳಿ ಪಡೆದುಕೊಳ್ಳಲಾಗಿರುತ್ತದೆ.<br><br>4. ಮುಂದುವರೆದು ಆಡಿಟ್ ಕಂಡಿಕೆಗಳಲ್ಲಿ ನಿರ್ದಿಷ್ಟವಾದ ದುರುಪಯೋಗ/ ನಿಯಮಾವಳಿಗಳ ಉಲ್ಲಂಘನೆ/ ನಿರ್ದಿಷ್ಟವಾಗಿ / ಹಣ ವಸೂಲಾತಿಗಳ ಕಂಡಿಕೆಗಳ ತೀರುವಳಿಯಾಗದಿದ್ದಲ್ಲಿ ಅಂತಹ ಸಂದರ್ಭದಲ್ಲಿ ಸಂಬಂಧಪಟ್ಟವರಿಂದ ಸದರಿ ಮೊತ್ತವನ್ನು ವಸೂಲಿ ಮಾಡಲು ನಿಯಮಾನುಸಾರ ಕ್ರಮವಹಿಸಲಾಗುತ್ತಿರುತ್ತದೆ. |
| **(ಈ)** | ಮುಜರಾಯಿ ದೇವಸ್ಥಾನಗಳ ವಾರ್ಷಿಕ ಆದಾಯ ಎಷ್ಟು; ಅದರಲ್ಲಿ ಸರ್ಕಾರದ ಪಾಲು ಎಷ್ಟು; (ಸಂಪೂರ್ಣ ಮಾಹಿತಿ ಒದಗಿಸುವುದು)? | ಧಾರ್ಮಿಕ ದತ್ತಿ ಇಲಾಖೆಯ ಪ್ರವರ್ಗ 'ಎ' ಮತ್ತು 'ಬಿ' ದೇವಾಲಯಗಳಿಂದ ಕಳೆದ ವಾರ್ಷಿಕ ಸಾಲಿನಲ್ಲಿ ರೂ.857.06 ಕೋಟಿಗಳ ಆದಾಯ ಬಂದಿರುತ್ತದೆ.<br><br>**ದೇವಾಲಯಕ್ಕೆ ಬರುವ ಯಾವುದೇ ಆದಾಯವನ್ನು ಸರ್ಕಾರದ ಬೊಕ್ಕಸಕ್ಕೆ ಸಂದಾಯ ಮಾಡುವುದಿಲ್ಲ.**<br><br>ಮುಜರಾಯಿ ಇಲಾಖೆಯ ದೇವಾಲಯಗಳಲ್ಲಿ ಹುಂಡಿಯಿಂದ ಮತ್ತು ಇತರೆ ಮೂಲಗಳಿಂದ ಸಂಗ್ರಹವಾಗುವ ಹಣವನ್ನು ಆಯಾಯ ದೇವಾಲಯಗಳ ಉಳಿತಾಯ ಖಾತೆಗೆ ಜಮಾ ಮಾಡಲಾಗುತ್ತದೆ<br><br>ಸದರಿ 'ಎ' ಮತ್ತು 'ಬಿ' ವರ್ಗದ ಧಾರ್ಮಿಕ ಸಂಸ್ಥೆಗಳಲ್ಲಿ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಅಧಿನಿಯಮ 1997ರ ಕಾಯ್ದೆ ಕಲಂ 25ರನ್ವಯ ಸ್ಥಳೀಯರನ್ನೊಳಗೊಂಡಂತೆ 09 ಜನ ಸದಸ್ಯರ ವ್ಯವಸ್ಥಾಪನಾ ಸಮಿತಿ ರಚಿಸಲಾಗುತ್ತದೆ. ಸದರಿ ಸಮಿತಿಯು ದೇವಾಲಯದ ವಾರ್ಷಿಕ ಆಯವ್ಯಯ ಮತ್ತು ಮೂಲಭೂತ ಸೌಕರ್ಯ ಕಲ್ಪಿಸುವುದು ಇತ್ಯಾದಿಗಳ ಕುರಿತಂತೆ ಚರ್ಚಿಸಿ ನಿರ್ಣಯ ಕೈಗೊಳ್ಳುತ್ತದೆ.<br><br>ಅದರಂತೆ, ದೇವಾಲಯದ ನಿಧಿಯಲ್ಲಿ ಸಂಗ್ರಹವಾಗುವ ಹಣವನ್ನು ದೇವಾಲಯದ ನಿರ್ವಹಣೆಗೆ ನಿತ್ಯಕಟ್ಟೆ, ಹೆಚ್ಚು ಕಟ್ಟೆ, ರಥೋತ್ಸವ, ಸಿಬ್ಬಂದಿ ವೆಚ್ಚ, ಅಭಿವೃದ್ಧಿ/ಜೀರ್ಣೋದ್ಧಾರ ಮತ್ತು ಮೂಲಭೂತ ಸೌಕರ್ಯ ಹಾಗೂ ದೇವಾಲಯದ ವತಿಯಿಂದ ನಡೆಸುವ ಶಿಕ್ಷಣ ಸಂಸ್ಥೆಗಳ ನಿರ್ವಹಣೆ ಉದ್ದೇಶ ಇತ್ಯಾದಿಗಳಿಗೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಅಧಿನಿಯಮ 1997ರ ಕಾಯ್ದೆ ಕಲಂ 36(1) ರಡಿಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ಆಯವ್ಯಯದನ್ವಯ ಬಳಸಲಾಗುತ್ತಿದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಪ್ರವರ್ಗ "ಸಿ" ಶ್ರೇಣಿಯ ದೇವಾಲಯಗಳು / ಧಾರ್ಮಿಕ ಸಂಸ್ಥೆಗಳು ಅಸ್ತಿತ್ವದಲ್ಲಿ ಇರುವವರೆಗೆ ಪ್ರತಿ ನಿತ್ಯದ ಪೂಜಾ ಕೈಂಕರ್ಯಕ್ಕಾಗಿ ಸರ್ಕಾರದ ಆದೇಶ ಸಂಖ್ಯೆ:ಕಂಇ 65 ಮುಅಬಿ 2025 ದಿ:22.04.2025 ರ ಆದೇಶದಂತೆ ವಾರ್ಷಿಕ ರೂ.72,000/- ಗಳ ಕನಿಷ್ಟ ತಸ್ತೀಕ್ ಮೊತ್ತವನ್ನು ಹಾಗೂ ಸರ್ಕಾರದ ಆದೇಶ ಸಂಖ್ಯೆ:ಕಂಇ 36 ಮುಅಬಿ 2025 ದಿ:20.08.2025 ರನ್ವಯ ವಾರ್ಷಿಕ ರೂ.72,000/- ಗಳ ಕನಿಷ್ಟ ವರ್ಷಾಸನವನ್ನು ನೀಡಲಾಗುತ್ತಿದೆ. ಇದೇ ಈ ದೇವಸ್ಥಾನಗಳ ಆದಾಯವಾಗಿರುತ್ತದೆ.<br><br>ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997 ರ ಕಲಂ 17 ರನ್ವಯ ವಾರ್ಷಿಕ ಆದಾಯವು ರೂ.10.00 ಲಕ್ಷಗಳನ್ನು ಮೀರುವ ಸಂಸ್ಥೆಗಳಿಂದ ನಿವ್ವಳ ಆದಾಯದ ಶೇ.10 ರಷ್ಟು ಮೊತ್ತವನ್ನು ಹಾಗೂ ವಾರ್ಷಿಕ ಆದಾಯವು ರೂ.5.00 ಲಕ್ಷಗಳನ್ನು ಮೀರಿದ್ದು, ಆದರೆ ರೂ.10.00 ಲಕ್ಷಗಳನ್ನು ಮೀರಿರದ ಸಂಸ್ಥೆಗಳ ನಿವ್ವಳ ಆದಾಯದ ಶೇ.5 ರಷ್ಟು ವಂತಿಗೆ ಮೊತ್ತವನ್ನು ಸಾಮಾನ್ಯ ಸಂಗ್ರಹಣ ನಿಧಿಗೆ ಜಮೆ ಮಾಡಬೇಕಾಗಿರುತ್ತದೆ.<br><br>2023-24ನೇ ಸಾಲಿನಿಂದ 2025-26ನೇ ಸಾಲಿನಲ್ಲಿ ಈವರೆಗೆ ಈ ಕೆಳಕಂಡಂತೆ ಸಾಮಾನ್ಯ ಸಂಗ್ರಹಣಾ ನಿಧಿ ಸಂಗ್ರಹವಾಗಿರುತ್ತದೆ. |

| ಕ್ರ. ಸಂ | ಆರ್ಥಿಕ ವರ್ಷ | ಜಮೆಯಾದ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1. | 2023-24 | 1022.02 |
| 2. | 2024-25 | 1610.55 |
| 3. | 2025-26 (ಇಲ್ಲಿಯವರೆಗೆ) | 2368.98 |
| ಒಟ್ಟು | | 5001.55 |

ಈ ರೀತಿ ಸಂಗ್ರಹವಾದ ವಂತಿಗೆ ಮೊತ್ತವನ್ನು ಇಲಾಖಾ ಅಧಿನಿಯಮ ಕಲಂ 19 (1) (ಎ) ರನ್ವಯ ಸಂದಾಯವಾದ ಹಣವನ್ನು ಹಿಂದೂ ದೇವಸ್ಥಾನಗಳಿಗೆ ಬಿಡುಗಡೆ ಮಾಡಲು ಅವಕಾಶವಿದ್ದು, ಅದರಂತೆ ಕಳೆದ ಮೂರು (3) ವರ್ಷಗಳಿಂದ ಇಲ್ಲಿಯವರೆಗೆ ಬಿಡುಗಡೆ ಮಾಡಲಾಗಿರುವ ವಿವರ ಈ ಕೆಳಕಂಡಂತಿದೆ.

| ಕ್ರ. ಸಂ | ಆರ್ಥಿಕ ವರ್ಷ | ಬಿಡುಗಡೆಯಾದ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1. | 2022-23 | 99.00 |
| 2. | 2023-24 | 17.50 |
| 3. | 2024-25 | 75.00 |
| ಒಟ್ಟು | | 191.50 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಇಲಾಖೆಯಲ್ಲಿ ಸಾಮಾನ್ಯ ಸಂಗ್ರಹಣಾ ನಿಧಿ ಖಾತೆಯಡಿ ರೂ 43.03 ಕೋಟಿ ಲಭ್ಯವಿರುತ್ತದೆ<br><br>ಬೆಂಗಳೂರು ನಗರದ ಕೆ.ಆರ್.ವೃತ್ತದಲ್ಲಿರುವ ಶ್ರೀ ರಾಮಾಂಜನೇಯ ಸ್ವಾಮಿ ದೇವಸ್ಥಾನಕ್ಕೆ ಸೇರಿದ ಜಾಗದಲ್ಲಿ ಸಾಮಾನ್ಯ ಸಂಗ್ರಹಣ ನಿಧಿಯಿಂದ ರೂ 27.70ಕೋಟಿಗಳ ಅಂದಾಜು ವೆಚ್ಚದಲ್ಲಿ ಧಾರ್ಮಿಕ ಸೌಧ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಹಾಗೂ ಅಂದಾಜು ವೆಚ್ಚದ ಮೊದಲನೇ ಕಂತಿನ ಬಾಬ್ತು (1/3) ರೂ 9.23 ಕೋಟಿ ಮೊತ್ತವನ್ನು ಲೋಕೋಪಯೋಗಿ ಇಲಾಖೆಗೆ ಪಾವತಿಸಲಾಗಿದೆ.<br><br>ಆಂಧ್ರಪ್ರದೇಶದ ತಿರುಪತಿ ಗಾಂಧಿ ರಸ್ತೆಯಲ್ಲಿರುವ ಕರ್ನಾಟಕ ರಾಜ್ಯ ಛತ್ರಕ್ಕೆ ಸೇರಿದ ಖಾಲಿ ನಿವೇಶನದಲ್ಲಿ ರೂ 17.10 ಕೋಟಿಗಳ ವೆಚ್ಚದಲ್ಲಿ ವಾಣಿಜ್ಯ ಸಂಕೀರ್ಣವನ್ನು ಹೊರ ರಾಜ್ಯ ಛತ್ರಗಳ ಸಂಯೋಜಿತ ನಿಧಿಯಿಂದ ನಿರ್ಮಿಸುವ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.<br><br>ತಿರುಪತಿಯ ತಿರುಚನೂರಿನಲ್ಲಿರುವ ಕರ್ನಾಟಕ ರಾಜ್ಯ ಛತ್ರದ ಕಲ್ಯಾಣ ಮಂಟಪದ ದುರಸ್ಥಿ ಮತ್ತು ಅಭಿವೃದ್ಧಿ ಕಾಮಗಾರಿಯನ್ನು ಹೊರರಾಜ್ಯ ಛತ್ರಗಳ ಸಂಯೋಜಿತ ನಿಧಿಯಿಂದ ಭರಿಸಿ ರೂ.3.90 ಕೋಟಿಗಳ ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ<br><br>ಉತ್ತರ ಪ್ರದೇಶದ ವಾರಣಾಸಿಯಲ್ಲಿರುವ ಕರ್ನಾಟಕ ರಾಜ್ಯ ಛತ್ರದ ಅಭಿವೃದ್ಧಿ ಮೊದಲನೇ ಹಂತದ ಕಾಮಗಾರಿಯನ್ನು ರೂ.9.98 ಕೋಟಿಗಳ ವೆಚ್ಚದಲ್ಲಿ ಹೊರ ರಾಜ್ಯ ಛತ್ರಗಳ ಸಂಯೋಜಿತ ನಿಧಿಯಿಂದ ಭರಿಸಿ ನಿರ್ವಹಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. |

ಸಂಖ್ಯೆ: ಕಂಇ 90 ಮುಸಪ್ರ 2026

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು

ರಾಜ್ಯದಲ್ಲಿ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಬರುವ ಪ್ರವರ್ಗ "ಎ" "ಬಿ"ಮತ್ತು " ಸಿ" ಸಂಸ್ಥೆಗಳ ವಿವರ

| ಕ್ರ ಸಂ | ಜಿಲ್ಲೆ | ಪ್ರವರ್ಗ "ಎ" ಅಧಿಸೂಚಿತ ಸಂಸ್ಥೆಗಳ ಸಂಖ್ಯೆ | ಪ್ರವರ್ಗ "ಬಿ"ಅಧಿಸೂಚಿತ ಸಂಸ್ಥೆಗಳ ಸಂಖ್ಯೆ | ಪ್ರವರ್ಗ "ಸಿ" ಅಧಿಸೂಚಿತ ಸಂಸ್ಥೆಗಳ ಸಂಖ್ಯೆ | ಪ್ರಸ್ತುತ ಇಲಾಖೆಯ ವ್ಯಾಪ್ತಿಯಲ್ಲಿರುವ ದೇವಾಲಯಗಳ ಸಂಖ್ಯೆ |
|---|---|---|---|---|---|
| 1 | ಬೆಂಗಳೂರು ನಗರ | 21 | 16 | 1068 | 1105 |
| 2 | ಬೆಂಗಳೂರು ಗ್ರಾಮಾಂತರ | 3 | 5 | 1132 | 1140 |
| 3 | ಬಾಗಲಕೋಟೆ | 0 | 2 | 1164 | 1166 |
| 4 | ಬಳ್ಳಾರಿ/ವಿಜಯನಗರ | 12 | 12 | 1275 | 1299 |
| 5 | ಬೆಳಗಾಂ | 5 | 6 | 3795 | 3806 |
| 6 | ವಿಜಯಪುರ | 0 | 1 | 550 | 551 |
| 7 | ಬೀದರ್ | 7 | 3 | 520 | 530 |
| 8 | ಚಾಮರಾಜನಗರ | 2 | 1 | 411 | 414 |
| 9 | ಚಿಕ್ಕಬಳ್ಳಾಪುರ | 3 | 4 | 1065 | 1072 |
| 10 | ಚಿಕ್ಕಮಗಳೂರು | 3 | 10 | 867 | 880 |
| 11 | ಚಿತ್ರದುರ್ಗ | 4 | 4 | 297 | 305 |
| 12 | ದಕ್ಷಿಣ ಕನ್ನಡ | 43 | 37 | 415 | 495 |
| 13 | ದಾವಣಗೆರೆ | 2 | 8 | 611 | 621 |
| 14 | ಧಾರವಾಡ | 0 | 0 | 930 | 930 |
| 15 | ಗದಗ | 0 | 0 | 1388 | 1388 |
| 16 | ಗುಲ್ಬರ್ಗಾ | 4 | 2 | 1624 | 1630 |
| 17 | ಹಾಸನ | 5 | 7 | 2444 | 2456 |
| 18 | ಹಾವೇರಿ | 1 | 11 | 1279 | 1291 |
| 19 | ಕೊಡಗು | 3 | 0 | 4 | 7 |
| 20 | ಕೋಲಾರ | 6 | 7 | 1315 | 1328 |
| 21 | ಕೊಪ್ಪಳ | 3 | 1 | 735 | 739 |
| 22 | ಮಂಡ್ಯ | 9 | 13 | 2100 | 2122 |
| 23 | ಮೈಸೂರು | 6 | 4 | 1301 | 1311 |
| 24 | ರಾಯಚೂರು | 4 | 1 | 1282 | 1287 |
| 25 | ರಾಮನಗರ | 7 | 5 | 855 | 867 |
| 26 | ಶಿವಮೊಗ್ಗ | 4 | 1 | 638 | 643 |
| 27 | ತುಮಕೂರು | 10 | 6 | 2445 | 2461 |
| 28 | ಉಡುಪಿ | 26 | 17 | 766 | 809 |
| 29 | ಉತ್ತರ ಕನ್ನಡ | 10 | 6 | 685 | 701 |
| 30 | ಯಾದಗಿರಿ | 2 | 3 | 1207 | 1212 |
| | ಒಟ್ಟು | 206 | 193 | 34168 | 34566 |



File No. RD/33/MSPA/2026-MUZ-REVENUE DEPATMENT SEC (Computer No. 2093382)